

# ಬಾಯಿಯಲ್ಲಿ ಹಾರ್ಮೋನ್ ಪ್ರಭಾವ!

ಮಹಿಳಾ ಲೈಂಗಿಕ ಹಾರ್ಮೋನುಗಳಾದ ಈಸ್ಟ್ರೊಜೆನ್ ಮತ್ತು ಪ್ರೊಜೆಸ್ಟೆರಾನ್‌ಗಳು ವಸಡುಗಳಿಗೆ ರಕ್ತ ಹರಿಯುವುದನ್ನು ಹೆಚ್ಚು ಮಾಡುತ್ತವೆ. ಇದರಿಂದಾಗಿ ವಸಡು ಹೆಚ್ಚು ಸೂಕ್ಷ್ಮವಾಗುತ್ತದೆ.

■ ಡಾ. ಕೆ.ಎಸ್. ಚೈತ್ರಾ

‘ನನ್ನ ಮಗಳಿಗೆ ಈಗೀಗ ವಸಡು ಸ್ವಲ್ಪ ದಪ್ಪ ಆಗಿದೆ; ಚೆಕ್ ಮಾಡಿ ಡಾಕ್ಟ್ರೆ’ ಹನ್ನೆರಡು ವರ್ಷದ ತನುವಿನ ಅಮ್ಮ ಚೆಕ್‌ಅಪ್‌ಗೆ ಕರೆದುಕೊಂಡು ಬಂದಿದ್ದರು.

ಇಪ್ಪತ್ತರ ದಿಶಾ ಪ್ರತಿ ತಿಂಗಳು ಪೀರಿಯಡ್ಸ್‌ಗೆ ಮುಂಚೆ ಗಮ್‌ನಿಂದ ರಕ್ತ ಬರುತ್ತೆ ಏನಾಗಿರಬಹುದು? ಎಂದು ಚಿಂತೆ ಮಾಡುತ್ತಿದ್ದಳು.

ನಾಲ್ಕು ತಿಂಗಳ ಗರ್ಭಿಣಿ ನಿಧಿಯದ್ದು ‘ವಸಡೆಲ್ಲ ಊದಿದೆ, ಮುಟ್ಟಿದರೆ ನೋವಾಗುತ್ತದೆ...’ ಎಂಬ ದೂರು!

ಐವತ್ತರ ಉಷಾ ‘ಯಾಕೋ ಇತ್ತೀಚೆಗೆ ಬಾಯೆಲ್ಲ ಒಣಗಿ ಮಾತನಾಡಲೇ ಕಷ್ಟ’ ಎಂದು ಬೇಸರಿಸಿದರು.

ವಿವಿಧ ವಯಸ್ಸಿನ ಹುಡುಗಿ, ಯುವತಿ, ಮಹಿಳೆಯರಾದ ಇವರೆಲ್ಲರೂ ಬಾಯಿ ಮತ್ತು ವಸಡಿಗೆ ಸಂಬಂಧಪಟ್ಟ ಬೇರೆ ಬೇರೆ ರೀತಿಯ ಸಮಸ್ಯೆಗಳಿಂದ ಬಳಲುತ್ತಿದ್ದು ಪರೀಕ್ಷೆಗೆ ಬಂದಿದ್ದರು ನಿಜ. ಆದರೆ ಎಲ್ಲದಕ್ಕೂ ಪ್ರಮುಖ ಕಾರಣ ಹಾರ್ಮೋನ್‌ಗಳ ಏರುಪೇರು! ಮಹಿಳೆಯರು ತಮ್ಮ ಜೀವನದ ವಿವಿಧ ಹಂತಗಳಲ್ಲಿ ಹಾರ್ಮೋನಿನ ಪ್ರಭಾವದಿಂದಾಗಿ ಹಲವಾರು ಬದಲಾವಣೆಗಳನ್ನು ಹೊಂದುತ್ತಾರೆ. ಇದರಿಂದಾಗಿ ತೂಕ ಗಳಿಕೆ ಇಳಿಕೆ, ಸುಸ್ತು, ನಿದ್ದೆಯಲ್ಲಿ ವ್ಯತ್ಯಾಸ, ಇವೆಲ್ಲವೂ ಸಾಮಾನ್ಯ. ಆದರೆ ಹಾರ್ಮೋನುಗಳು ಮಹಿಳೆಯರ ಬಾಯಿ ದಂತಾರೋಗ್ಯದ ಮೇಲೆ ವಿಶೇಷ ಪರಿಣಾಮವನ್ನು ಬೀರುತ್ತವೆ.

## ಹಾರ್ಮೋನ್‌ಗಳ ಪ್ರಭಾವ

ಮಹಿಳಾ ಲೈಂಗಿಕ ಹಾರ್ಮೋನುಗಳಾದ ಈಸ್ಟ್ರೊಜೆನ್ ಮತ್ತು ಪ್ರೊಜೆಸ್ಟೆರಾನ್‌ಗಳು ವಸಡುಗಳಿಗೆ ರಕ್ತ ಹರಿಯುವುದನ್ನು ಹೆಚ್ಚು ಮಾಡುತ್ತದೆ. ಇದರಿಂದಾಗಿ ವಸಡು ಹೆಚ್ಚು ಸೂಕ್ಷ್ಮವಾಗುತ್ತದೆ ಮತ್ತು ಸೂಕ್ಷ್ಮಾಣು ಜೀವಿಗಳ ದಾಳಿಗೆ ಸುಲಭವಾಗಿ ತುತ್ತಾಗುತ್ತದೆ. ಈ ಹಾರ್ಮೋನ್‌ಗಳು ವಿಷಕಾರಿ ವಸ್ತುಗಳಿಗೆ ದೇಹ ಪ್ರತಿಕ್ರಿಯಿಸುವ ರೀತಿಯನ್ನೂ ಬದಲಾಯಿಸುತ್ತವೆ. ಇದರಿಂದಾಗಿ ಹಲ್ಲು ಮತ್ತು ವಸಡುಗಳು ಹಲ್ಲಿನ ಪಾಚಿ ಸೂಕ್ಷ್ಮಾಣು ಜೀವಿಗಳ ದಾಳಿಯನ್ನು ಎದುರಿಸುವ ಸಂಪೂರ್ಣ ಸಾಮರ್ಥ್ಯವನ್ನು ಹೊಂದಿರುವುದಿಲ್ಲ. ಆರಂಭಿಕ ಹಂತದಲ್ಲಿ ಇದು ಕೆಂಪಾದ, ಉಬ್ಬಿದ, ಆಗಾಗ್ಗೆ ರಕ್ತಸ್ರಾವವಾಗುವ ವಸಡಿನ ಉರಿಯೂತವಾಗಿ (ಜಿಂಜವೈಟಿಸ್) ಕಂಡುಬರುತ್ತದೆ. ಈ ಹಂತದಲ್ಲಿಯೇ ಗುರುತಿಸಿ